ಉಪಾಧ್ಯಕ್ಷರು: ''ಖಂಡ 1ರಿಂದ 10ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 10 ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ: ''ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಅನಂತನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೇ, ''ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ರ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ: ''ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ರ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಶ್ರೀ ಎಚ್.ಎನ್.ನಂಜೇಗೌಡ: ವಿಧಾನಪರಿಷತ್ತಿನಿಂದ ಅಂಗೀಕೃತವಾಗಿ ಬಂದಿರುವಂಥವುಗಳನ್ನು ತೆಗೆದುಕೊಳ್ಳಬಹುದು.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೇ, ತಾವು ಇಲ್ಲಿಗೆ ನಿಲ್ಲಿಸಿ. ಇನ್ನು ಮುಂದಕ್ಕೆ ದಯವಿಟ್ಟು ಹೋಗಬೇಡಿ. ಈ ವಿಧೇಯಕಗಳ ಬಗ್ಗೆ ಪ್ರಾಮಾಣಿಕವಾಗಿ ಚರ್ಚೆಯಾಗಬೇಕಾಗುತ್ತದೆ. ಚರ್ಚೆ ಇಲ್ಲದೆ ಒಂದೇ ದಿನ ಎರಡು-ಮೂರು ಗಂಟೆಯಲ್ಲಿ 15 ವಿಧೇಯಕಗಳನ್ನು ಮಂಡಿಸಿ ಅದನ್ನು ನಾವು ತೆಗೆದುಕೊಂಡು

ಹೋಗುತ್ತೇವೆ ಎಂದರೆ ನಾವು ನಿಜವಾಗಲೂ ಅಪರಾಧ ಮಾಡಿದಂತಾಗುತ್ತದೆ. ನೀವು ಮಾಡಿಕೊಳ್ಳಿ, ನನ್ನದೇನೂ ಅಭ್ಯಂತರವಿಲ್ಲ. ನಾವಂತೂ ಇದನ್ನು ವಿರೋಧಮಾಡಿ ನಾನು ಹೋಗುತ್ತೇನೆ. ನೀವು ಮಾಡಿಕೊಳ್ಳಿ, ಈ ನಾಡಿನ ಜನತೆ ಇದನ್ನು ನೋಡಲಿ. ಈ ಒಂದು ಕಂತೆ ವಿಧೇಯಕಗಳನ್ನು ಕಳುಹಿಸಿದ್ದೀರಲ್ಲಾ, ಒಂದು ಗಂಟೆಯೊಳಗೆ ಚರ್ಚೆ ಮಾಡಿ ಎಂಥದೋ ಒಂದು ತೀರ್ಮಾನ ತೆಗೆದುಕೊಂಡರು ಎಂದು ಹೇಳಿ ಈ ನಾಡಿನ ಜನತೆ ತೀರ್ಮಾನ ಮಾಡಲಿ. ನನ್ನದೇನೂ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ವಾಟಾಳರೇ, ಇದೊಂದನ್ನು ಮಾಡೋಣ.

ಶ್ರೀ ವಾಟಾಳ್ ನಾಗರಾಜ್: ನೀವು ಎಷ್ಟಾದರೂ ಮಾಡಿಕೊಳ್ಳಿ, ಈ ನಾಡಿನ ಜನತೆ ತೀರ್ಮಾನ ಮಾಡಿಕೊಳ್ಳಲಿ. ತಾವು ಈ ಸದನದ ಅಧ್ಯಕ್ಷರು 'ಶಾಸನಸಭೆಯ ಅಧ್ಯಕ್ಷರು' ಶಾಸನ ರಚನೆಯ ಸಭೆ ಶಾಸನ ರಚನೆ ನಿಮ್ಮ ಇಚ್ಛೆಬಂದಂತೆ ಮಾಡಿಕೊಳ್ಳುವುದಕ್ಕಾಗುವುದಿಲ್ಲ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು.)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೇ, ಈಗ ಒಂದು ಕೆಲಸ ಮಾಡೋಣ. ಕೊನೆಯದಾಗಿ ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ಒಂದು ಸಣ್ಣ ಬಿಲ್ ಇದೆ. ಅದನ್ನು ತಾವು ಒಂದು ತೆಗೆದುಕೊಂಡು ತಾವು ಸಭೆಯನ್ನು ಅಡ್ಜರ್ನ್ ಮಾಡಿ.

ಶ್ರೀ ವಾಟಾಳ್ ನಾಗರಾಜ್: ಶಾಸನಸಭೆಗೆ ಅಗೌರವ ಇದು. ಇದನ್ನು ಶಾಸನಸಭೆ ಎಂದು ಕರೆಯುವುದಕ್ಕಾಗುವುದಿಲ್ಲ ಇದನ್ನು ಚಾವಡಿ ಎಂದು ಕರೆಯಬೇಕಾಗುತ್ತದೆ. ಇದು ಶಾಸನಸಭೆಯಲ್ಲ. ಬಹಳ ನೋವಾಗುತ್ತದೆ.

ಉಪಾಧ್ಯಕ್ಷರು: ತಾವು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿದ್ದು ಮತ್ತೆ ಅದನ್ನೆಲ್ಲಾ ಒಪ್ಪಿಕೊಂಡು ಬಂದು ಇಲ್ಲಿ ಚಾವಡಿ ಎಂದು ಮಾತನಾಡಿದರೆ ಇದು ಸರಿಯಲ್ಲ. ಇದನ್ನು ಚಾವಡಿ ಎಂದು ಕರೆದರೆ ಹೇಗೆ ಆಗುತ್ತದೆ?

(ಗೊಂದಲ)

ಶ್ರೀಮತಿ ಪ್ರಮಿಳಾ ನೇಸರ್ಗಿ: ಮಾನ್ಯ ಉಪಾಧ್ಯಕ್ಷರೇ, ಈ ರೀತಿ ಶಾಸನವನ್ನು ಮಾಡುವುದಕ್ಕೆ ನಾವು ಒಪ್ಪುವುದೇ ಇಲ್ಲ.

ಶ್ರೀ ವಿ.ಮುನಿಯಪ್ಪ: ಮಾನ್ಯ ಉಪಾಧ್ಯಕ್ಷರೇ, ಯಾವುದೇ ಒಂದು ಹೊಸ ವಿಧೇಯಕ ತಂದರೆ ಏನು ಅದರ ಆಬ್ಜೆಕ್ಟ್ಸ್ ಏನು, ಅದರ ರಿಪರ್‌ಕೇಷನ್ಸ್ ಏನು ಎಂದು ಚರ್ಚೆಗೆ ಒಂದು ಅವಕಾಶ ಬೇಡವೇ ಇಲ್ಲಿ?

ಉಪಾಧ್ಯಕ್ಷರು: ಏನ್ರೀ ಇದು? ನಿಮ್ಮ ಲೀಡರ್ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ನೀವು ಬೇಡ ಎಂದು ಹೇಳುತ್ತೀರಿ? ಮಾನ್ಯ ಮುನಿಯಪ್ಪನವರೇ, ತಾವು ಮಂತ್ರಿಯಾಗಿ ಕೆಲಸ ಮಾಡಿದ್ದೀರಿ.

(ಗೊಂದಲ)

ಶ್ರೀ ಸಿ.ಭೈರೇಗೌಡ (ಕೃಷಿ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಈಗ ನನ್ನ ಇಲಾಖೆಗೆ ಸಂಬಂಧಪಟ್ಟ ಬಿಲ್ಲನ್ನು ತರುತ್ತೀರಾ? ಇದನ್ನು ಮುಗಿಸೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ತಾವು ತೆಗೆದುಕೊಳ್ಳುವುದಾದರೆ ತೆಗೆದುಕೊಳ್ಳಿ, ಇಲ್ಲದಿದ್ದರೆ ಅಡ್ಜರ್ನ್ ಮಾಡಿಬಿಡಿ.

(ಗೊಂದಲ)

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಸಭಾಪತಿಯವರೇ, ಈ ಸದನ ನೋ ಕಾನ್‌ಫಿಡೆನ್ಸ್ ಮೋಷನ್ ಚರ್ಚೆ ಮಾಡುತ್ತಿರುವ ಸಂದರ್ಭದಲ್ಲಿ ಸುಮಾರು ಆರೇಳು ದಿವಸಗಳು ನಾವು ಇಲ್ಲಿ ಯಾವುದೇ ಒಂದು ವಿಧೇಯಕವನ್ನು ಮಂಡಿಸಲಿಲ್ಲ. ಆದ್ದರಿಂದ ನಾವು ವಿಧೇಯಕವೆಲ್ಲವನ್ನೂ ಕೂಡ ಮೇಲ್ಮನೆಯಲ್ಲಿ ನಾವು ಮಾಡಿದ್ದೇವೆ. ಕಳೆದ ನಾಲ್ಕೈದು ದಿವಸಗಳಿಂದ ಮೇಲ್ಮನೆಯಲ್ಲಿ ಮಂಡಿಸಿರುವ ವಿಧೇಯಕಗಳೆಲ್ಲವೂ ಕೂಡ ಚರ್ಚೆಯಾಗಿದೆ. ಅಲ್ಲಿ ಅಂಗೀಕಾರವಾಗಿದೆ. ಅದನ್ನು ನಾವು ಇವತ್ತು ಇಲ್ಲಿಗೆ ತಂದಿದ್ದೇವೆ. ಈಗ ನಿನ್ನೆಯವರೆಗೆ ನೋ ಕಾನ್‌ಫಿಡೆನ್ಸ್ ಮೋಷನ್ ಮೇಲೆ ಚರ್ಚೆಯಾಯಿತು. ಇನ್ನು ನಾವು ಇಲ್ಲಿ ವಿಧೇಯಕಗಳನ್ನು ತಂದಿದ್ದಾಯಿತು. ಅದರಲ್ಲಿ ನಾನು ಹೇಳುತ್ತೇನೆ, ಭೀತಿಯ ಪ್ರಶ್ನೆ ಇರುವ ಯಾವುದೇ ವಿಧೇಯಕ ಇಲ್ಲ. ಇವೆಲ್ಲವೂ ಸರಳಾವಾಗಿರತಕ್ಕಂಥದ್ದು. ಈಗ ಲ್ಯಾಂಡ್ ಫಾರ್ಮ್ಸ್ ಆ್ಯಕ್ಟ್, ನಾವು ಏನು ಮಾಡಬೇಕು ಹೇಳಿ. ನಾವು ಸದನವನ್ನು ಕರೆದಿದ್ದೇವೆ. ಸದನವನ್ನು ಕರೆದಾದ ಮೇಲೆ ನಾವು ಕುಳಿತಿದ್ದೇವೆ. ಆರೇಳು ದಿವಸ ತಾವು ಅದರ ಮೇಲೆ ಚರ್ಚೆ ಮಾಡಿದ್ದೀರಿ. ಮೇಲ್ಮನೆಯಲ್ಲಿ ನಾವು ಅದನ್ನು ಮಂಡಿಸಿ ಕಡೆಗೆ ಅಲ್ಲಿ ಸುಮಾರು ನಾಲ್ಕೈದು ದಿವಸಗಳವರೆಗೆ ಪ್ರತಿ ದಿವಸ ಚರ್ಚೆ ಮಾಡಿ ನಾವು ಈ ದಿವಸ ಇಲ್ಲಿಗೆ ತಂದಿದ್ದೇವೆ. ಇದಕ್ಕಿಂತ ಮುಂಚೆ ತರಲಿಕ್ಕೆ ಅವಕಾಶ ಇರಲಿಲ್ಲ. ತಂದಿದ್ದರೆ ನೀವು ಅದನ್ನು ಬಿಡುತ್ತಿರಲಿಲ್ಲ. ಈಗ ನಾವು ಏನು ಮಾಡಬೇಕು?

(ಗೊಂದಲ)

ಶ್ರೀ ಎಸ್.ಕೃಷ್ಣಪ್ಪ: ಮಾನ್ಯ ಉಪಾಧ್ಯಕ್ಷರೇ, ದಯವಿಟ್ಟು ಮುನಿಯಪ್ಪನವರನ್ನು ತಮ್ಮ ಸ್ಥಾನಕ್ಕೆ ಬರುವಂತೆ ಮಾಡಿ.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಉಪಾಧ್ಯಕ್ಷರೇ, ಇವತ್ತು ಮುನಿಯಪ್ಪನವರು ಇಲ್ಲಿ ಧರಣಿ ಕುಳಿತಿದ್ದಾರೆ. ಅವರು ಎತ್ತಿರುವ ಅಂಶಗಳು ಇವೆ, ನಾವು ಇವತ್ತು ಅವಸರ ಮಾಡಿ ತಂದಿದ್ದೇವೆ, ಏಕೆಂದರೆ 22ನೇ ತಾರೀಖು ಮೇಯರ್ ಎಲೆಕ್ಷನ ಇದೆ, ಅದು ಆಗಬೇಕೆಂದು ಮಾಡುತ್ತಿದ್ದೀರಿ. ಆದರೆ ಅವರು ಇವತ್ತು ಏನು ಹೇಳುತ್ತಿದ್ದಾರೆ, ಅದು ನಿಮಗೆ ಮುಂದಿನ ತಿಂಗಳು ಅಥವಾ ಅದರ ಮುಂದಿನ ತಿಂಗಳಾದರೂ ಪರಿಣಾಮ ನಿಮಗೆ ಗೊತ್ತಾಗುತ್ತದೆ. Appeal Committe ಅಂದರೆ ಏನು ಅರ್ಥ? If you don't call it as Taxation Appeals Committee? ಅಲ್ಲಿಂದಲೇ ಪ್ರಾರಂಭ. ನಾನು ಹೇಳುತ್ತೇನೆ, ಡಿಸೆಂಬರ್ ಜನವರಿ ಹೊತ್ತಿಗೆ ನೀವು ಇವತ್ತು ಬಿಲ್ ಏನು ಪಾಸ್ ಮಾಡಿದ್ದೀರಿ ಅದರ ಪರಿಣಾಮ ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಎಂ.ಸಿ.ನಾಣಯ್ಯ: ನೀವು ಹೇಳಿರತಕ್ಕ ವಿಚಾರವನ್ನು ಒಪ್ಪುತ್ತೇನೆ. ಈಗ ಬಿಲ್ ಪಾಸ್ ಆಗಿದೆ. ನಾಳೆ ಕಾನೂನಿನ ಕ್ರಮ ಬದ್ಧತೆಯನ್ನು ಪ್ರಶ್ನಿಸಿದಾಗ ನಾವು ಅದಕ್ಕೆ ಉತ್ತರ ಹೇಳುತ್ತೇವೆ.

ಶ್ರೀ ಎಸ್.ಸುರೇಶ್ ಕುಮಾರ್: ಅವಕಾಶವನ್ನು ಕೊಟ್ಟರೆ ಈ ಪರಿಣಾಮ ಆಗುತ್ತದೆ ಎಂದು ನಾನು ಹೇಳುವುದು.

(ಗೊಂದಲ)

ಉಪಾಧ್ಯಕ್ಷರು: ಈಗಾಗಲೇ ವಿಧೇಯಕದ ಒಪ್ಪಿಗೆ ಆಗಿದೆ. ಈಗ ಅದರ ಬಗ್ಗೆ ಚರ್ಚೆ ಬೇಡ. ಮಾನ್ಯ ಮುನಿಯಪ್ಪನವರು ದಯಮಾಡಿ ತಮ್ಮ ಸ್ಥಾನಕ್ಕೆ ಹೋಗಿ. ಇನ್ನು ಕೊನೆಯ ವಿಧೇಯಕ ಭೂ ಸುದಾರಣೆಯದ್ದು ತೆಗೆದುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಬಿಲ್ ಪಾಸ್ ಆಗಿದೆ. ಕೆಲವು ಲೂಪ್‌ಹೋಲ್ಸ್ ಬಗ್ಗೆ ಮಾನ್ಯ ಮುನಿಯಪ್ಪನವರು ಹೇಳಿದರು. ಅವರು ಕಾರ್ಪೊರೇಟರ್ ಆಗಿದ್ದರಿಂದ ಅವರಿಗೆ ಕೆಲವು ಸಾಧಕ ಬಾಧಕಗಳು ಗೊತ್ತಿದೆ. ಏನು ಮುಂದೆ ಅದರ ಪರಿಣಾಮ ಗೊತ್ತಿದೆ. ಅದಕ್ಕೆ ಅವರಿಗೂ ಇವರಿಗೂ ವ್ಯತ್ಯಾಸ ಬಂದಿದೆ.

(ಮಾನ್ಯ ಮುನಿಯಪ್ಪನವರು ಬಾವಿಯಿಂದ ಮಾತನಾಡುತ್ತಿದ್ದರು)

ಉಪಾಧ್ಯಕ್ಷರು: ತಾವು ಬಾವಿಯಲ್ಲಿ ನಿಂತು ಮಾತನಾಡಬೇಡಿ. ತಮ್ಮ ಸ್ಥಾನಕ್ಕೆ ಬಂದು ಮಾತನಾಡಿ.

(ಮಾನ್ಯ ಮುನಿಯಪ್ಪನವರು ಬಾವಿಯಿಂದ ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಬಿಲ್ ಪಾಸ್ ಆಗಿದೆ, ಸಧ್ಯಕ್ಕೆ ಇರಲಿ. ಮುಂದೆ ಅದಕ್ಕೆ ಅಮೆಂಡ್‌ಮೆಂಟ್ ಅಥವಾ ಆರ್ಡಿನೆನ್ಸ್ ತಂದು ಏನಾದರೂ ತರುವ ಬಗ್ಗೆ ಯೋಚನೆ ಮಾಡಬಹುದು.

ಶ್ರೀ ಎಸ್.ಸುರೇಶ್ ಕುಮಾರ್: ನಾನು ಈಗ ಮಾನ್ಯ ಮುನಿಯಪ್ಪನವರಿಗೆ ಹೇಳುತ್ತಿದ್ದೇನೆ. ನೀವು ಹೇಳುವುದೆಲ್ಲಾ ಹೇಳಿದ್ದೀರಿ. ಆದರೂ ಕೇಳದೇ ಇದ್ದರೆ ಅನುಭವಿಸುತ್ತಾರೆ ನಿಮ್ಮ ಸ್ಥಾನಕ್ಕೆ ಬನ್ನಿ.

ಉಪಾಧ್ಯಕ್ಷರು: ಈಗ ಭೂ ಸುಧಾರಣಾ ತಿದ್ದುಪಡಿ ವಿಧೇಯಕ ಇದೆ.

ಶ್ರೀ ಸಿ.ಬೈರೇಗೌಡ: ನನ್ನದು ಒಂದು ಸಣ್ಣ ಬಿಲ್ ಇದೆ. ಮೈಸೂರು ಟೊಬ್ಯಾಕೋ ಕಂಪನಿಗೆ ಸಂಬಂಧಿಸಿದ್ದು ಇದೆ. ಇದು ಲಿಸ್ಟ್‌ನಲ್ಲಿ ಇರತಕ್ಕದ್ದು.

ಉಪಾಧ್ಯಕ್ಷರು: ಅವರು ಅದನ್ನು ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ನೀವು ಸ್ವಲ್ಪ ಇರಿ.

ಶ್ರೀ ಕಾಗೋಡು ತಿಮ್ಮಪ್ಪ: ಯಾವುದೂ ಕೊಟ್ಟಿಲ್ಲ. ಎಲ್ಲಿಂದ ಬರುತ್ತದೆ?

ಶ್ರೀ ಸಿ.ಬೈರೇಗೌಡ: ಪಟ್ಟಿಯಲ್ಲಿ ಇದೆ. ಇದು ಸಣ್ಣ ಬಿಲ್.

ಶ್ರೀ ಕಾಗೋಡು ತಿಮ್ಮಪ್ಪ: ಇದರಲ್ಲಿ ಏನೂ ಇಲ್ಲ.

ಉಪಾಧ್ಯಕ್ಷರು: ಬಂದಿಲ್ಲ.

ಶ್ರೀ ಸಿ.ಬೈರೇಗೌಡ: ನಾನಲ್ಲ ಕೊಡಬೇಕಾಗಿರತಕ್ಕದ್ದು. ಅಧ್ಯಕ್ಷರು ಕೊಡುತ್ತಾರೆ.

3. ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕ 1998

ಪರ್ಯಾಲೋಚನಾ ಪ್ರಸ್ತಾಪ

ಉಪಾಧ್ಯಕ್ಷರು: ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ಮಾನ್ಯ ಸೋಮಶೇಖರ್ ಅವರು ವಿಧೇಯಕವನ್ನು ಮಂಡಿಸಬೇಕು.

ಶ್ರೀ ಬಿ.ಸೋಮಶೇಖರ್ (ಕಂದಾಯ ಮಂತ್ರಿ): ಮಾನ್ಯ ಉಪಾಧ್ಯಕ್ಷರೆ, ''ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ನೇ ಸಾಲಿನ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.''